ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ ಕಲಬುರಗಿ-585102 (ಕರ್ನಾಟಕ ರಾಜ್ಯ)

Website: https://kkrtc.karnataka.gov.in

ಸಂಖ್ಯೆ: ಕಕಸಾ/ಕೇಕ/ಸಿಬ್ಬಂದಿ/ನೇಮಕ/ನೇ-1/ಕ-461/ 626 /2026-27 ದಿನಾಂಕ: 25.06.2026

:: ಪ್ರಕಟಣೆ ::

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ: 08.10.2025 ರಂದು ಸಂಖ್ಯೆ: ಇಡಿ/ಕೆಇಎ/ ಆಡಳಿತ/ ಸಿ.ಆರ್.05/2025 (ಕಲ್ಯಾಣ-ಕರ್ನಾಟಕ) ಮತ್ತು ಇಡಿ/ಕೆಇಎ/ಆಡಳಿತ/ಸಿ.ಆರ್.04/2025 (ಆರ್ಪಿಸಿ) ಗಳನ್ವಯ ಅಧಿಸೂಚಿಸಿದ **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನಿರ್ವಾಹಕ ಮತ್ತು ಸಹಾಯಕ ಲೆಕ್ಕಿಗ** ಹುದ್ದೆಗಳ ನೇಮಕಾತಿಗಾಗಿ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಮತ್ತೊಂದು ಅವಕಾಶವನ್ನು ಕಲ್ಪಿಸುತ್ತಿದೆ. ಅದೇ ರೀತಿ ಕೆಲವು ಹೆಚ್ಚುವರಿ ಅಭ್ಯರ್ಥಿಗಳನ್ನು ಸಹ ಅವರ ಮೂಲ ದಾಖಲಾತಿ ಪರಿಶೀಲನೆಗೆ ಕರೆಯಲಾಗಿದೆ. ಹೆಚ್ಚುವರಿ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ಒದಗಿಸಲಾಗುವುದಿಲ್ಲ.

ಆದ್ದರಿಂದ, 2026ರ ಜೂನ್ 16 ರಿಂದ 19 ರವರೆಗೆ ನಡೆದ ದಾಖಲಾತಿ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳು ಹಾಗೂ ಹೊಸದಾಗಿ ಹಾಜರಾಗಬೇಕಾದ ಹೆಚ್ಚುವರಿ ಅಭ್ಯರ್ಥಿಗಳು ದಿನಾಂಕ: **02.07.2026 ರಂದು** ಕಲಬುರಗಿಯ **"ಕಕರಸಾ ನಿಗಮದ ಕೇಂದ್ರ ಕಛೇರಿಯಲ್ಲಿ"** ತಮ್ಮ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಸೂಚಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ನಿಗಮದ ವೆಬ್ ವಿಳಾಸ **kkrtc.karnataka.gov.in** ಗೆ ಭೇಟಿ ನೀಡುವುದು. ಸಹಾಯವಾಣಿ ಸಂಖ್ಯೆ 6366374977 (ಕಛೇರಿ ವೇಳೆಯಲ್ಲಿ ಮಾತ್ರ).

ಸಹಿ/-

ವಾ.ಸಾ.ಸಂ.ಇ/ಕಲಬುರಗಿ/254/ಕೆ.ಎಸ್.ಎಂ.ಸಿ.&ಎ/2026-27 ಅಧ್ಯಕ್ಷರು - ಆಯ್ಕೆ ಸಮಿತಿ